# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ

## ಸಿ.ಸಿ ನಂ. 798/2014

ಫ್ರಾಸಾ – 2 ಚಾಸಾ – 2

ಸಾಕ್ಷಿಯನ್ನು ದಿಃ 10.06.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ಶಿವಮಾದಮ್ಮ |
| ತಂದೆಯ / ಗಂಡನ ಹೆಸರು | ಕಲ್ಲೇಗೌಡ |
| ವಯಸ್ಸು | 60 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಗಾಣಾಳು |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ**

1. ಆರೋಪಿ ನನಗೆ ಗೊತ್ತು. ಚಾಸಾ.1 ನನ್ನ ಮಗ. ಚಾಸಾ.3 ರಿಂದ 5 ನಮ್ಮ ಊರಿನವರು.
2. ಆರೋಪಿಗಳು ನಮ್ಮ ಜಮೀನಿಗೆ ಅಕ್ರಮವಾಗಿ ಪ್ರವೇಶ ಮಾಡಿಲ್ಲ, ಯಾವುದೇ ರೀತಿಯ ನಷ್ಟವನ್ನುಂಟು ಮಾಡಿಲ್ಲ ಹಾಗೂ ನನಗೆ ಮತ್ತು ಚಾಸಾ.1 ರವರಿಗೆ ಹಲ್ಲೆ ಮಾಡಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಗಾಯಾಳುವಾಗಿದ್ದು ತನ್ನ ಹೇಳಿಕೆಗೆ ವಿರುದ್ಧ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದ**

3. ದಿನಾಂಕ 06.03.2014 ರಂದು ರಾತ್ರಿ ಸಮಯದಲ್ಲಿ ಆರೋಪಿಗಳು ಮಡಹಳ್ಳಿ ಗ್ರಾಮದಲ್ಲಿರುವ ನನ್ನ ಗಂಡನ ಜಮೀನಾದ ಸರ್ವೆ ನಂ.104 ರಲ್ಲಿ ಅಕ್ರಮವಾಗಿ

ಪ್ರವೇಶ ಮಾಡಿ ಜಮೀನಿನ ತೆವರಿಯನ್ನು ಜೆ.ಸಿ.ಬಿ ಯಿಂದ ತಳ್ಳಿ ಹಾಕಿ ಪಂಪ್ ಸೆಟ್ ಮೋಟಾರ್ ಸ್ಟಾರ್ಟರ್ ಪೆಟ್ಟಿಯನ್ನು ಉರುಳಿಸಿ ಕಿತ್ತು ಹಾಕಿ, ವಿದ್ಯುತ್ ವೈರನ್ನು ಕಿತ್ತು ಹಾಕಿ ವಿದ್ಯುತ್ ಕಂಬವನ್ನು ಹೊಡೆದು ಮಣ್ಣನ್ನು ಹಾಕಿ ನಷ್ಟವನ್ನುಂಟು ಮಾಡಿರುತ್ತಾರೆ ಹಾಗೂ ದಿನಾಂಕಃ 07.03.2014 ರಂದು ಬೆಳಿಗ್ಗೆ 07.30 ರಿಂದ 08.00 ಗಂಟೆ ಸಮಯದಲ್ಲಿ ಗಾಣಾಳು ಗ್ರಾಮದಲ್ಲಿ ಆರೋಪಿಗಳು ನನಗೆ ಕೈಯಿಂದ ಕತ್ತು, ಬೆನ್ನು ಹಾಗು ಮೈಮೇಲೆ ಹಲ್ಲೆ ಮಾಡಿ ನೋವುಂಟು ಮಾಡಿರುತ್ತಾರೆಂದರೆ ಸರಿಯಲ್ಲ.

**4.** ಈ ಕುರಿತು ದಿನಾಂಕ 13.03.2014 ರಂದು "ನಾನು ಮೇಲ್ಕಂಡ ವಿಳಾಸದಲ್ಲಿ ..................................................................................................... ..................... ನೋಡಿದರೆ ಗುರುತಿಸುತ್ತೇನೆ" ಎಂದು ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳೀಕೆಯನ್ನು ಒಪ್ಪದ ಕಾರಣ ನಿ.ಪಿ.5 ಎಂದು ಗುರುತಿಸಲಾಯಿತು

**5.** ನಾನು ಮತ್ತು ಆರೋಪಿ ರಾಜಿ ಮಾಡಿಕೊಂಡಿರುತ್ತೇವೆಂದರೆ ಎಂದರೆ ಸರಿ. ನಾನು ಆರೋಪಿ ರಾಜಿ ಮಾಡಿಕೊಂಡ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲವೆಂದು ಹೇಳಿರುತ್ತಾರೆ.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ